ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ : ಬಿಟಿಇ/02/ಇಸಿಎಸ್2/2013

ಕಾರ್ಯದರ್ಶಿಯವರ ಕಛೇರಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-01
ದಿನಾಂಕ: 07-08-2013

**<u>ಸುತ್ತೋಲೆ</u>**

ವಿಷಯ: 2013ರ ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಯ ಮರು ಮೌಲ್ಯಮಾಪನ ಕಾರ್ಯಕ್ಕೆ ಉಪನ್ಯಾಸಕರನ್ನು ನಿಯೋಜಿಸುವ ಬಗ್ಗೆ

* * * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2013ರ ಏಪ್ರಿಲ್/ಮೇ ಸೆಮಿಸ್ಟರ್ ಪರೀಕ್ಷೆಯ ಮರು ಮೌಲ್ಯಮಾಪನ ಕಾರ್ಯವನ್ನು ದಿನಾಂಕ: 16-08-2013ರಿಂದ ದಿನಾಂಕ:18-08-2013ರವರೆಗೆ ಎಂ. ಇ. ಐ. ಪಾಲಿಟೆಕ್ನಿಕ್, ರಾಜಾಜಿನಗರ, ಬೆಂಗಳೂರು, ಇಲ್ಲಿ ಈ ಕೆಳಕಂಡ ಬೋರ್ಡ್‌ವಾರು ವೇಳಾಪಟ್ಟಿಯಂತೆ ನಡೆಸಲು ನಿರ್ಧರಿಸಲಾಗಿದೆ. ಮರು ಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಲಾದ ಉಪನ್ಯಾಸಕರ ಪಟ್ಟಿಯನ್ನು ಬಿಟಿಇ ಲಿಂಕ್ಸ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಪಟ್ಟಿಯಲ್ಲಿ ನಮೂದಿಸಲಾಗಿರುವ ಉಪನ್ಯಾಸಕರನ್ನು ಕಡ್ಡಾಯವಾಗಿ ಮರುಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸುವಂತೆ ಸಂಬಂಧಪಟ್ಟ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಸೂಚಿಸಲಾಗಿದೆ. ಮರುಮೌಲ್ಯಮಾಪನ ಸಮಯದಲ್ಲಿ ಉಪನ್ಯಾಸಕರಿಗೆ ಯಾವುದೇ ರೀತಿಯ ರಜೆ ಮಂಜೂರು ಮಾಡಬಾರದೆಂದು ಸ್ಪಷ್ಟವಾಗಿ ತಿಳಿಸಲಾಗಿದೆ.

ತಾಂತ್ರಿಕ ಪರೀಕ್ಷಾ ಮಂಡಳಿಯ 139ನೇ ಕೇಂದ್ರಿಯ ಸಭೆಯ ನಿರ್ಣಯ 139.4.8.3ರ ಪ್ರಕಾರ ಮರುಮೌಲ್ಯಮಾಪನ ಕಾರ್ಯಕ್ಕೆ ನಿಯೋಜಿಸಲ್ಪಟ್ಟ ಉಪನ್ಯಾಸಕರುಗಳು ಗೈರುಹಾಜರಾದರೆ, ಗೈರು ಹಾಜರಾದ ಅವಧಿಯ ಸಂಬಳವನ್ನು ಕಟಾಯಿಸಲಾಗುವುದು ಮತ್ತು ತಾಂತ್ರಿಕ ಪರೀಕ್ಷಾ ಮಂಡಳಿಯ 151ನೇ ಕೇಂದ್ರಿಯ ಸಭೆಯ ನಿರ್ಣಯ 151.3.5ರ ಪ್ರಕಾರ ಖಾಸಗಿ ಪಾಲಿಟೆಕ್ನಿಕ್‌ಗಳ ಉಪನ್ಯಾಸಕರುಗಳು ಮರು ಮೌಲ್ಯಮಾಪನ ಕಾರ್ಯಕ್ಕೆ ಗೈರು ಹಾಜರಾದ ಸಂದರ್ಭಗಳಲ್ಲಿ ಸದರಿ ಸಂಸ್ಥೆಗಳ ಅಫಿಲಿಯೇಷನ್(ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಸಂಯೋಜನೆ) ರದ್ದು ಪಡಿಸಲು/ನೀಡದಿರಲು ಕ್ರಮ ಜರುಗಿಸಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ. ಮರುಮೌಲ್ಯಮಾಪನ ಕಾರ್ಯಕ್ಕೆ ಉಪನ್ಯಾಸಕರನ್ನು ಕಾರ್ಯ ವಿಮುಕ್ತಿಗೊಳಿಸದ ಪ್ರಿನ್ಸಿಪಾಲರುಗಳನ್ನು ಮುಂದಿನ ಆಗುಹೋಗುಗಳಿಗೆ ನೇರ ಹೊಣೆಗಾರರನ್ನಾಗಿಸಿ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಲಾಗಿದೆ.

| ಕ್ರ.ಸಂ. | ಮರು ಮೌಲ್ಯಮಾಪನ ಪ್ರಾರಂಭದ ದಿನಾಂಕ | ಬೋರ್ಡ್‌ನ ಹೆಸರು |
|---|---|---|
| 1 | 16-08-2013 | CE, CS, EC, ENG, EE, ME, SC |
| 2 | 17-08-2013 | AN, AT, CP, MC, MN, MT, MTT, PT |
| 3 | 18-08-2013 | ADFT, AR, BT, CH, CHEMISTRY, CN, CR, IC,PO, TX, WT |

7/8
ಕಾರ್ಯದರ್ಶಿ
ತಾಂತ್ರಿಕ ಪರೀಕ್ಷಾ ಮಂಡಳಿ
ಅರಮನೆ ರಸ್ತೆ, ಬೆಂಗಳೂರು-1

ಇವರಿಗೆ:
ರಾಜ್ಯದಲ್ಲಿನ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ಅಗತ್ಯ ಕ್ರಮಕ್ಕಾಗಿ

ಪ್ರತಿ: 1) ಇ-ಗವರ್ನೆನ್ಸ್ ವಿಭಾಗಕ್ಕೆ – ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
2) ಕಂಪ್ಯೂಟರ್ ವಿಭಾಗ – ಮರುಮೌಲ್ಯಮಾಪಕರ ಪಟ್ಟಿಯನ್ನು ಬಿಟಿಇಲಿಂಕ್ಸ್ ನಲ್ಲಿ ಪ್ರಕಟಿಸಲು
3) ಕಾರ್ಯದರ್ಶಿಯವರ ಆಪ್ತ ಶಾಖೆ